C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್ಃ 102/2022

**ಚಾ.ಸಾ.–04 ಪ್ರಾ.ಸಾ.–04**

| | |
|---|---|
| **ಸಾಕ್ಷಿದಾರರ ಹೆಸರು** | **ನಂಜಯ್ಯ** |
| **ತಂದೆಯ ಹೆಸರು** | **ಲೇಟ್ ಪಾಪಣ್ಣ** |
| **ವಯಸ್ಸು** | **50 ವರ್ಷಗಳು** |
| **ಉದ್ಯೋಗ** | **ಕೂಲಿ ಕೆಲಸ** |
| **ವಾಸ** | **ಬೀರಶೆಟ್ಟಿಹಳ್ಳಿ ಗ್ರಾಮ, ಪಾಂಡವಪುರ ತಾಲ್ಲೂಕು** |

**ದಿನಾಂಕಃ 18.10.2025 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಚಾಸಾ- 1 ರಿಂದ 3 ನನ್ನ ತಮ್ಮಂದಿರು. ನಾವು ಪರಿಶಿಷ್ಟ ಜಾತಿಯ ಮಾದಿಗ ಜನಾಂಗಕ್ಕೆ ಸೇರಿದವರು. ಚಾಸಾ- 5, 6, ರವರ ಪರಿಚಯ ನನಗೆ ಇದೆ. ಅವರು ನಮ್ಮ ಜೊತೆ ಕೆಲಸ ಮಾಡುತ್ತಿದ್ದರು. ಚಾಸಾ- 7, 8, 9, 10 ರವರು ನನಗೆ ಗೊತ್ತು.

2. ಈ ದಿನ ನ್ಯಾಯಾಲಯದ ಮುಂದಿರುವ 1, 2, 4 ಮತ್ತು 5 ನೇ ಆರೋಪಿತರ ಪರಿಚಯ ನನಗೆ ಇದೆ. (Witness identified accused Nos. 1, 2, 4 and 5 in the dock). 3ನೇ ಆರೋಪಿ ರವರ ಪರಿಚಯ ಕೂಡ ನನಗೆ ಇದೆ. (learned Counsel for Accused submits that there is no identity dispute with respect to accused No.3). ಅವರು ಒಕ್ಕಲಿಗ ಜಾತಿಗೆ ಸೇರಿದವರು.

3. ದಿಃ25.01.2022 ರಂದು ಬೆಳಿಗ್ಗೆ 7.00 ಗಂಟೆಗೆ ದೇವೆಗೌಡನಕೊಪ್ಪಲಿಗೆ ನಾವು 16 ಜನ ಕಾಂಕ್ರೀಟ್ ಕೆಲಸಕ್ಕೆಂದು ಸಿದ್ದೇಗೌಡರ ಮನೆಗೆ ಹೋಗಿದ್ದೆವು. ಅಲ್ಲಿ ಮೂರು

ಹಂತಸ್ತಿಗೆ ಕಾಂಕ್ರೀಟ್ ಕೆಲಸ ಮಾಡುತ್ತಿದ್ದೆವು. ಬೆಳಿಗ್ಗೆ 7.00 ರಿಂದ ಸಂಜೆ 5.00 ಗಂಟೆವರಗೆ ಕಾಂಕ್ರೀಟ್ ಕೆಲಸ ಮಾಡಿದೆವು. ಕೆಲಸ ಮುಗಿದ ನಂತರ ಮೇಸ್ತ್ರಿ ಬಾಬು ರವರನ್ನು ಚಾಸಾ- 1 ರವರು ಕೂಲಿ ಕೇಳಿದರು. ಆ ಸಮಯ ಆರೋಪಿ 1 ಮತ್ತು ಸುಮಾರು 20 ಜನ ಗುಂಪಲ್ಲಿ ನಮ್ಮ ಜೊತೆ ಗಲಾಟೆ ಮಾಡಿದರು. ಚಾಸಾ- 1 ರವರು ವೀಡಿಯೋ ಮಾಡುತ್ತಿದ್ದಾಗ 20 ಜನರಲ್ಲಿ ಒಬ್ಬರು ಅವರ ಮೋಬೈಲ್ ಫೋನ್ ಕಿತ್ತುಕೊಂಡರು. ನನ್ನ ಬಲಗೈಗೆ 1ನೇ ಆರೋಪಿ ಕಬ್ಬಿಣದ ರಾಡಿನಿಂದ ಚುಚ್ಚಿದರು. ಚಾಸಾ- 2 ರವರ ಕಪಾಲಕ್ಕೆ ದೊಣ್ಣೆಯಿಂದ ಸಿದ್ದೇಗೌಡರು ಹೊಡೆದರು. ನನ್ನ ತಮ್ಮಂದಿರೆಲ್ಲರು ಬಿದ್ದರು. ಹೊಲಯನನ್ನ ಮಗನೆ, ಮಾದಿಗನನ್ನ ಮಗನೇ ಎಂದು 1ನೇ ಆರೋಪಿ, ಸಿದ್ದೇಗೌಡ ರವರು ಬೈದರು. ಚಾಸಾ- 1, 2, 3 ಮತ್ತು ನನಗೆ ಪೆಟ್ಟಾಯಿತು. ನಾವು ಪಾಂಡವಪುರ ಸರ್ಕಾರಿ ಆಸ್ಪತ್ರೆಗೆ ಹೋದೆವು.

4. ಆರೋಪಿತರು ನಮಗೆ ಹಲ್ಲೆ ಮಾಡಿದ ಕಬ್ಬಿಣದ ರಾಡು ಮತ್ತು ದೊಣ್ಣೆಯನ್ನು ಗುರುತಿಸಬಲ್ಲೆ. ನನಗೆ ಈಗ ತೋರಿಸಿದ ಎಂಒ–1 ರಿಂದ 3 ದೊಣ್ಣೆಗಳು ಮತ್ತು ಕಬ್ಬಿಣದ ರಾಡು ಅದೇ ಆಗಿರುತ್ತದೆ. ಚಾಸಾ- 1 ರವರ ಮೊಬೈಲ್ ಪೋನನ್ನು ಗುರುತಿಸಬಲ್ಲೆ. ಅದನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ಎಂಒ–5 ಎಂದು ಗುರುತಿಸಲಾಗಿದೆ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157ರ ಪ್ರಕಾರ ಅನುಮತಿ ಕೊಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

5. ದಿಃ25.02.2022 ರಂದು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ದಿಃ25.01.2022 ರಂದು ಸಂಜೆ 5.00 ಗಂಟೆಗೆ ಕೆಲಸ ಮುಗಿದ ನಂತರ ಹಣದ ವಿಚಾರದಲ್ಲಿ ಆರೋಪಿತರು ನಮ್ಮ ಜೊತೆಗೆ ಜಗಳ ಮಾಡಿದ್ದಲ್ಲದೆ ಕಲ್ಲು ಎತ್ತಿಹಾಕಿ ಸಾಯಿಸುತ್ತೇನೆ ಎಂದು ಬಂದರು ಎಂದರೆ ಸರಿ. ಸದರಿ ಸೈಜುಗಲ್ಲನ್ನು ಈಗ ನೋಡುತ್ತಿದ್ದೇನೆ ಎಂದರೆ ಸರಿ. ಅದನ್ನು ಈಗಾಗಲೇ ಎಂಒ–4 ಎಂದು ಗುರುತಿಸಲಾಗಿದೆ. ನಾವು ಚಿಕಿತ್ಸೆ ಪಡೆಯಲು ಪಾಂಡವಪುರ ಸರ್ಕಾರಿ ಆಸ್ಪತ್ರೆಗೆ ಹೋದಾಗ ಆರೋಪಿತರು ಸದರಿ ಆಸ್ಪತ್ರೆ ಬಳಿ ಬಂದು ಎಂಎಲ್‌ಸಿ ಚೀಟಿಯನ್ನು

ಹರಿದು ಹಾಕಿ ಪೋಲೀಸರಿಗೆ ದೂರು ಕೊಟ್ಟರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿದರು ಎಂದರೆ ಸರಿ. ನಂತರ ಚಾಸಾ- 1 ಮತ್ತು 2 ರವರನ್ನು ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ಕರೆದುಕೊಂಡು ಹೋಗಿದ್ದೆವು ಎಂದರೆ ಸರಿ. ಈ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಎನ್.ವಿ ವಕೀಲರಿಂದ:**

6. ಚಾಸಾ- 1 ನಮ್ಮ ಗ್ರಾಮದಲ್ಲಿ ನಮ್ಮ ಜಾತಿಯ ಮುಖಂಡರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ಹಲವಾರು ಸಂಘ ಸಂಸ್ಥೆಗಳಲ್ಲಿ ಭಾಗಿಯಾಗಿದ್ದಾರೆ ಎಂದರೆ ಸರಿಯಲ್ಲ. ನಾವು ಕೆಲಸಕ್ಕೆಂದು 2ನೇ ಆರೋಪಿಯ ಮನೆಗೆ ಹೋದಾಗ ಅದೇ ಪ್ರಥಮ ಬಾರಿಗೆ ಅವರನ್ನು ನೋಡಿರುತ್ತೇನೆ ಎಂದರೆ ಸರಿ. ನಾವು 2ನೇ ಆರೋಪಿಯ ಬಳಿಯಾಗಲೀ ಇತರೆ ಯಾವುದೇ ಆರೋಪಿತರ ಬಳಿಯಾಗಲೀ ನಮ್ಮ ಹೆಸರು ಜಾತಿಯನ್ನು ಹೇಳಿಕೊಂಡಿರುವುದಿಲ್ಲ. ಅದೇ ರೀತಿ ಆರೋಪಿತರು ಸಹಾ ಅವರ ಹೆಸರು ಜಾತಿಯನ್ನು ನಮಗೆ ಹೇಳಿರುವುದಿಲ್ಲ. ಮನೆ ಕಟ್ಟುವ ವಿಷಯಕ್ಕೆ 2ನೇ ಆರೋಪಿ ಮತ್ತು ಮೇಸ್ತ್ರಿ ಬಾಬುರವರ ಮಧ್ಯೆ ಮಾತುಕತೆಯಾಗಿರುತ್ತದೆ ಎಂದರೆ ಸರಿ.

7. ಚಾಸಾ- 1 ರವರು ಈ ಪ್ರಕರಣ ಅಲ್ಲದೇ ಬೇರೆ 2 – 3 ಜಾತಿ ನಿಂದನೆ ಮಾಡಿರುತ್ತಾರೆ ಎಂದು SC/ST PoA Act ಅಡಿ ದೂರು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರಕರಣಗಳಲ್ಲಿ ಸರ್ಕಾರದಿಂದ ಚಾಸಾ- 1 ರವರು ಪರಿಹಾರದ ಹಣವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಾಬ್ತು ಚಾಸಾ- 1 ಮತ್ತು 2 ರವರು ಪರಿಹಾರದ ಹಣ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೂ ಸಹಾ ರೂ.70,000/– ಸರ್ಕಾರದಿಂದ ಪರಿಹಾರದ ಹಣ ಬಂದಿರುತ್ತದೆ ಎಂದರೆ ಬಂದಿರಬಹುದು ನನಗೆ ಗೊತ್ತಿಲ್ಲ. ನಾನು ಪರಿಹಾರದ ಹಣ ಪಡೆದುಕೊಂಡಿದ್ದರೂ ಸಹಾ ಇಲ್ಲಾ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. 2ನೇ ಆರೋಪಿ ಮನೆ ಕಟ್ಟಲು ಪಾಂಡವಪುರದ ಬಾಬು ಎನ್ನುವ ಮೇಸ್ತ್ರಿಗೂ 2ನೇ ಆರೋಪಿಗೂ ಮಧ್ಯೆ ಮಾತುಕತೆಯಾಗಿರುತ್ತದೆ ಎಂದರೆ ಸರಿ. ಮನೆ ಕಟ್ಟಲು ಚದರಕ್ಕೆ ಇಷ್ಟು ಹಣ ಎಂದು 2ನೇ ಆರೋಪಿ ಸದರಿ ಬಾಬುರವರಿಗೆ ಹಣ ನೀಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

**9.** ದಿಃ25.01.2022 ರಂದು ನಡೆಯಬೇಕಿದ್ದ ಕಾಂಕ್ರೀಟ್ ಕೆಲಸಕ್ಕೆ ಕೂಲಿಯ ಬಗ್ಗೆ 2ನೇ ಆರೋಪಿ ಆಗಲೀ ಇನ್ನಿತರೆ ಆರೋಪಿತರಾಗಲೀ ನನ್ನ ಜೊತೆ ಮಾತುಕತೆ ಮಾಡಿರುವುದಿಲ್ಲ. ಮೇಸ್ತ್ರಿ ಬಾಬುರವರು ನಮ್ಮನ್ನು ಕರೆಸಿರುತ್ತಾರೆ. ಚಾಸಾ- 1 ರವರ ಜೊತೆ ಮಾತುಕತೆ ಮಾಡಿರುತ್ತಾರೋ ಎಂದು ನನಗೆ ಗೊತ್ತಿಲ್ಲ. ಆ ದಿನ 2ನೇ ಆರೋಪಿಯ ಕುಟುಂಬದವರು ಕೂಲಿ ಕೆಲಸ ಮಾಡುವವರಿಗೆ ಸಂಜೆ ಹೊತ್ತು ಊಟವನ್ನು ಕೊಟ್ಟಿರುತ್ತಾರೆ. ಊಟ ಮಾಡುವ ಮುಂಚೆ ಒಂದಷ್ಟು ಜನ ಕೆಲಸಗಾರರು ಮದ್ಯಪಾನ ಮಾಡಿ ಊಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಂತರ ಚಾಸಾ- 1 ರವರು 2ನೇ ಆರೋಪಿಯ ಹತ್ತಿರ ಕೂಲಿ ಕೇಳಿದರು ಎಂದರೆ ಸರಿಯಲ್ಲ. ಸಿದ್ದೇಗೌಡರ ಹೆಂಡತಿಯ ಬಳಿ ಕೇಳಿರುತ್ತಾರೆ. 2ನೇ ಆರೋಪಿ ಚಾಸಾ- 1 ರವರಿಗೆ ಹಣದ ಮಾತುಕತೆ ಬಾಬು ಮೇಸ್ತ್ರಿಯ ಜೊತೆ ಆಗಿರುತ್ತದೆ ಅವರಿಂದ ಹಣ ಪಡೆದುಕೊಳ್ಳಿ ಎಂದರೆ ಸರಿ. ಆ ಸಮಯ ಬಾಬು ಮೇಸ್ತ್ರಿಗೆ ಫೋನ್ ಮಾಡಿದಾಗ ಅವರ ಫೋನ್ ಸ್ವಿಚ್ ಆಫ್ ಆಗಿತ್ತು ಎಂದರೆ ಸರಿಯಲ್ಲ. ಬಾಬುರವರು ಆ ಸಮಯ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆ ದಿನ ಬೆಳಿಗ್ಗೆ 7.00 ರಿಂದ ಸಂಜೆ 5.00 ಗಂಟೆಯವರೆಗೂ ಮೇಸ್ತ್ರಿ ಬಾಬು ಸ್ಥಳದಲ್ಲಿಯೇ ಇದ್ದರು ಈ ಬಗ್ಗೆ ಪೊಲೀಸರಿಗೆ ಹೇಳಿರುತ್ತೇನೆ. ಅಲ್ಲಿಯವರೆಗೂ ಮಾಡಿರುವ ಕೆಲಸಕ್ಕೆ ಹಾಗೂ ಅದಕ್ಕಿಂತ ಹೆಚ್ಚು ಹಣವನ್ನು ಈಗಾಗಲೇ ಬಾಬು ಮೇಸ್ತ್ರಿಗೆ ನೀಡಿರುತ್ತೇವೆ ಎಂದು 2ನೇ ಆರೋಪಿ ಚಾಸಾ- 1 ರವರಿಗೆ ಹೇಳಿದರು ಎಂದರೆ ಸರಿಯಲ್ಲ. ಆ ಸಮಯ ಮದ್ಯಪಾನ ಮಾಡಿದ ಕೆಲಸಗಾರರು ಆ ದಿನ ಮಾಡಿದ್ದ ಕಾಂಕ್ರೀಟನ್ನು ಕೀಳಲು ಪ್ರಯತ್ನ ಮಾಡಿದರು ಎಂದರೆ ಸರಿಯಲ್ಲ. ದಿಃ25.01.2022 ರಂದು 2ನೇ ಆರೋಪಿಯ ಕಟ್ಟಡದ ಕೆಲಸಗಾರರಾಗಿ ನಾನು ಹೋಗಿರುವುದೇ ಇಲ್ಲ ಎಂದರೆ ಸರಿಯಲ್ಲ. ಚಾಸಾ- 1 ಮತ್ತು 2 ರವರಿಗೂ ಹಾಗೂ ನನಗೂ ಸರ್ಕಾರದಿಂದ ಹಣ ಪಡೆಯುವ ಸಲುವಾಗಿ ಕೆಲಸಕ್ಕೆ ಹೋಗಿದ್ದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**10.** ಎಂಒ–1 ಕಬ್ಬಿಣದ ರಾಡು ಎಂಒ–2, 3 ದೊಣ್ಣೆಗಳು, ಎಂಒ–4 ಕಲ್ಲು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ಎಂಒ–1 ರಿಂದ 4 ವಸ್ತುಗಳನ್ನು ಗುರುತಿಸಲು ಯಾವುದೇ ನಿಖರವಾದ ಗುರುತು ಅದರಲ್ಲಿ ಇರುವುದಿಲ್ಲ. ಎಂಒ–1 ರಿಂದ 4 ವಸ್ತುಗಳನ್ನು ಹಲ್ಲೆಗೆ ಉಪಯೋಗಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**11.** 1 ಮತ್ತು 2ನೇ ಆರೋಪಿತರು ಯಾವುದೇ ಮುದ್ದೆ ಮಾಲುಗಳಿಂದ ನನಗಾಗಲೀ ಚಾಸಾ- 1 ಅಥವಾ 2 ರವರಿಗಾಗಲೀ ಯಾವುದೇ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಆರೋಪಿತರು ನನಗಾಗಲೀ ನನ್ನ ಜೊತೆ ಇದ್ದವರಿಗಾಗಲೀ ಜಾತಿ ನಿಂದನೆ ಮಾಡಿರಲಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಹೋಗಿದ್ದ ಪಾಂಡವಪುರ ಸರ್ಕಾರಿ ಆಸ್ಪತ್ರೆಯಲ್ಲಿ ಸಿಸಿ ಟಿವಿ ಕ್ಯಾಮೇರಾಗಳು ಇವೆ. ಆಸ್ಪತ್ರೆಯಲ್ಲಿ ನಾನು ನನ್ನ ತಮ್ಮಂದಿರನ್ನು ಹೊರತುಪಡಿಸಿ ಬೇರೆಯಾರು ಇರಲಿಲ್ಲ ಎಂದರೆ ಸರಿಯಲ್ಲ. ಆ ಸಮಯ ಆರೋಪಿತರು ಮನೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ಆರೋಪಿತರು ಆಸ್ಪತ್ರೆಯಲ್ಲಿ ಗಲಾಟೆ ಮಾಡಿ ಚೀಟಿ ಹರಿದು ಹಾಕಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಸ್ಥಳದಲ್ಲಿ ಇರಲಿಲ್ಲ ಆದಕಾರಣ ಒಂದು ತಿಂಗಳ ನಂತರ ಸುಳ್ಳು ದೂರು ಸೃಷ್ಟಿ ಮಾಡಿ ನೀಡಿರುತ್ತೇವೆ ಎಂದರೆ ಸರಿಯಲ್ಲ. ಯಾವುದೇ ಆರೋಪಿ ಚಾಸಾ- 1 ರವರಿಂದ ಯಾವುದೇ ಮೊಬೈಲ್ ಫೋನ್ ಕಿತ್ತುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

**12.** ಪಾಂಡವಪುರ ಆಸ್ಪತ್ರೆಯಲ್ಲಿ ವೈದ್ಯರ ಬಳಿ ಯಾವ ವ್ಯಕ್ತಿ ಯಾವ ವಸ್ತುವಿನಿಂದ ಹೊಡೆದಿರುತ್ತಾರೆ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ- 1 ರವರು ನೀಡಿದ ಸುಳ್ಳು ದೂರಿಗೆ ಅವರಿಗೆ ಅನುಕೂಲವಾಗುವಂತೆ ಮತ್ತು ನನಗೂ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಾಬ್ತು ನಾನು ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ. ಈ ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ರೀತಿಯ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

**13.** **ಮರು ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**

**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**

**ನ್ಯಾಯಾಲಯ, ಮಂಡ್ಯ**